ಅವರು ತಮ್ಮ ದೇಶಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ಈಗಲೂ ಸಹ ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳಾಗಿದ್ದಾಗ್ಯೂ ಸಹ ಅದೇ ಸಂಪ್ರದಾಯ ನಡೆದುಕೊಂಡು ಬರುತ್ತಿದೆ ಆದುದರಿಂದ ಇನ್ನು ಮುಂದಾದರೂ ಸಹ ನಮ್ಮ ದೇಶದಲ್ಲಿ ದೊರೆಯುತಕ್ಕ ಸಂಪನ್ಮೂಲಗಳೇನಿವೆ ಅವುಗಳನ್ನು ನಾವು ಇಲ್ಲಿಯೇ ಉಪಯೋಗಿಸಿಕೊಳ್ಳುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಅಂತಾ ನನ್ನ ಪ್ರಶ್ನೆ?

ಶ್ರೀ ಡಿ. ದೇವರಾಜ್ ಅರಸ್.—ಅದು ನನ ಒಬ್ಬನ ಕೈಯಲ್ಲಿ ಇಲ್ಲ ತಮಗೆ ಹೇಳುವುದಾದರೆ ನಾವೇ ಪ್ರಾಜೆಕ್ಟ್‌ಗಳನ್ನು ತಯಾರುಮಾಡಿ ನಾವೇ ಹೊರಗಡೆಯಿಂದ ಹಣ ತಂದು ಉಪಯೋಗ ಮಾಡಿಕೊಳ್ಳತಕ್ಕ ಶಕ್ತಿ ನಮ್ಮ ರಾಜ್ಯಸರ್ಕಾರಕ್ಕೆ ಇಲ್ಲ. ಸಂವಿಧಾನದಲ್ಲಿ ನಮಗೆ ಆ ಸ್ವಾತಂತ್ರ್ಯವನ್ನು ಕೊಟ್ಟಿದ್ದರೆ ತಾವು ಹೇಳಿದ್ದನ್ನು ಒಪ್ಪಬಹುದಾಗಿತ್ತು. ಹಣ ನಮ್ಮ ಹತ್ತಿರ ಇಲ್ಲ ಮತ್ತು ಹಣವನ್ನು ನಾವು ಇನ್ನೊಬ್ಬರ ಹತ್ತಿರ ಕೇಳುವ ಹಾಗೂ ಇಲ್ಲ ಅದೇ ನಮಗೆ ಬಂದಿರುವ ತೊಂದರೆ.

Uranium find near Kalasa Village

19. SRI C. APPAJI (Kanakapur)- Will the Chief Minister be pleased to state.—

(a) whether it is a fact that Uranium has been found out by the Geological Survey of India near Kalasa in Chikkamagalur District

(b) If so, the details?

SRI D. DEVARAJ URS (Chief Minister).—

(a) Yes.

b) Detailed investigations were carried out by the Geological Survey of India and the Atomic Minerals Division of the Atomic Energy Department, Government of India. Results of the investigations were not promising. Further, investigation work has been temporarily suspended.

ಶ್ರೀ ಸಿ. ಅಪ್ಪಾಜಿ.—ಸ್ವಾಮಿ, ತಾತ್ಕಲಿಕವಾಗಿ ಇನ್‌ವೆಸ್ಟಿಗೇಷನ್ ಕೆಲಸ ನಿಲ್ಲಿಸಿದ್ದಾರೆಂದು ಹೇಳಿದ್ದೀರಿ ಮುಂದೆ ಇನ್‌ವೆಸ್ಟಿಗೇಷನ್ ಕೆಲಸ ಪ್ರಾರಂಭ ಮಾಡುವ ವಿಚಾರ ಏನಾದರೂ ಕೇಂದ್ರ ಸರ್ಕಾರಕ್ಕೆ ಇದೆಯೇ?

† ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಅದು ಉಪಯೋಗವಿಲ್ಲವೆಂದು ಬಿಟ್ಟುಬಿಟ್ಟಿದ್ದಾರೆ. ಎನ್ ಎಂಡಿಸಿಯವರು ಅಲ್ಲಿ ಹೋಗಿ ನೋಡಿಕೊಂಡು ಬಂದಿದ್ದಾರೆ.

ಶ್ರೀ ಸಿ. ಅಪ್ಪಾಜಿ.—ಸ್ವಾಮಿ, ಆ ಜಾಗವನ್ನು ಪ್ರೊಟೆಕ್ಟೆಡ್ ಏರಿಯಾ ಅಂತ ಮಾಡುವುದು ಉತ್ತಮ ಇಲ್ಲದಿದ್ದರೆ ಖಾಸಗಿಯವರು ಅದನ್ನು ಎಕ್ಸ್‌ಪ್ಲಾಯ್ಟ್ ಮಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಖಾಸಗಿಯವರು ಯಾರಾದರೂ ತೆಗೆದುಕೊಳ್ಳುವವರಿದ್ದರೆ ಕರೆದುಕೊಂಡು ಬನ್ನಿ ನೋಡೋಣ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

Missue of funds collected for School building by the President Shirakoppa Town Municipal Council.

82. SRI K. YENKATAPPA (Shikaripur)—Will the Minister for Municipal Administration be pleased to state:—

(a) the names of Presidents and Chief Officers of Shiralakoppa Municipality, Shikaripura taluk, during the years 1975 and 1976;